ಹುಬ್ಬಳ್ಳಿ ಧಾರವಾಡ ಸ್ಮಾರ್ಟ್‌ಸಿಟಿ ಲಿಮಿಟೆಡ್
HUBBALLI DHARWAD SMART CITY LIMITED
Special Purpose Vehicle for Implimentation of Smart City Project
(Registered Company No. CIN : U74999KA2017 PLC 101265)

ನಂ:ಎಚ್‌ಡಿಎಸ್‌ಸಿಎಲ್ /ಪತ್ರಿಕಾಮಾಹಿತಿ/2019-20

ದಿ: 25-06-2019

# ಪತ್ರಿಕಾ ಮಾಹಿತಿ

ವಿಷಯ : ಹುಬ್ಬಳ್ಳಿ-ಧಾರವಾಡ ಸ್ಮಾರ್ಟ‌ಸಿಟಿ ಯೋಜನೆಗಳಲ್ಲಿ ಇಲ್ಲಿಯವರೆಗೆ ಆದ ಪ್ರಗತಿಯನ್ನು ಪೂರೈಸುವ ಕುರಿತು.

* * * * *

ಹುಬ್ಬಳ್ಳಿ-ಧಾರವಾಡ ನಗರವು ಸ್ಮಾರ್ಟಸಿಟಿ ಯೋಜನೆ ಅಡಿಯಲ್ಲಿ 2ನೇ ಸುತ್ತಿನ ಅಡಿಯಲ್ಲಿ ಆಯ್ಕೆಯಾಗಿ ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್ ಸಂಸ್ಥೆಯು ವಿಶೇಷ ವಾಹಕ ಸಂಸ್ಥೆಯಾಗಿ ಸಾರ್ವಜನಿಕ ಕಂಪನಿ ಕಾಯ್ದೆ 2013 ರ ಅಡಿಯಲ್ಲಿ ನೊಂದಾಯಿಸಲ್ಪಟ್ಟು 15 ನಿರ್ದೇಶಕರು ಇದ್ದು ದಿ: 06-04-2017 ರಿಂದ ಪ್ರಥಮ ಆಡಳಿತ ಮಂಡಳಿ ನಿರ್ದೇಶಕ ಸಭೆಯೊಂದಿಗೆ ಸ್ಮಾರ್ಟಸಿಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಪ್ರಾರಂಭಿಸಿದೆ. ಪ್ರಸ್ತುತ ಸ್ಮಾರ್ಟಸಿಟಿ ಯೋಜನೆಯಲ್ಲಿ ಸ್ಮಾರ್ಟಸಿಟಿ ಅನುದಾನ ಒಳಗೊಂಡ ಒಟ್ಟು 54 ಯೋಜನೆಗಳು ಅಳವಡಿಸಿದ್ದು, ಒಟ್ಟು ಯೋಜನಾ ವೆಚ್ಚ ರೂ. 1000 ಕೋಟಿ ಇರುತ್ತದೆ. ಸದರಿ ಯೋಜನಾ ಅವಧಿ ಐದು ವರ್ಷಗಳ ವರೆಗೆ ಇದ್ದು, ಇಲ್ಲಿಯವರೆಗೆ ಒಟ್ಟು 06 ಯೋಜನೆಗಳ ರೂ. 3.162 ಕೋಟಿ ವೆಚ್ಚದ ಕೆಲಸಗಳನ್ನು ಪೂರ್ಣಗೊಳಿಸಿರುತ್ತದೆ. ಉಳಿದ 16 ಯೋಜನೆಗಳ ಒಟ್ಟು ಮೊತ್ತ ರೂ. 258.44 ಕೋಟಿ ವೆಚ್ಚದ ಯೋಜನೆಗಳು ಟೆಂಡರ ಆಹ್ವಾನಿಸಿ ಕಾರ್ಯಾದೇಶ ನೀಡಿ ಅನುಷ್ಠಾನದ ವ್ಯಾಪ್ತಿಯಲ್ಲಿ ಇರುತ್ತವೆ. ಇಲ್ಲಿಯವರೆಗೆ ಒಟ್ಟು 15 ಯೋಜನೆಗಳ ಮೊತ್ತ ರೂ. 250.44 ಕೋಟಿ ಟೆಂಡರ ಆಹ್ವಾನಿಸಿರುತ್ತದೆ. ಉಳಿದ 06 ಯೋಜನೆಗಳ ಒಟ್ಟು ಮೊತ್ತ ರೂ. 94.33 ಕೋಟಿ ಸಾಧ್ಯತಾ ವರದಿಯನ್ನು ತಯಾರಿಸಲಾಗಿದ್ದು, ಸಧ್ಯದಲ್ಲಿಯೇ ಕೇಂದ್ರ ತಾಂತ್ರಿಕ ಸಮಿತಿಯ ಅನುಮೋದನೆಯೊಂದಿಗೆ ಟೆಂಡರ ಆಹ್ವಾನಿಸಲಾಗುವುದು. ಉಳಿದ 07 ಯೋಜನೆಗಳ ಒಟ್ಟು ಮೊತ್ತ ರೂ. 309.35 ಕೋಟಿ ಪರಿಕಲ್ಪನೆ ವರದಿಯೊಂದಿಗೆ ಸಾಧ್ಯತಾ ವರದಿಯನ್ನು ತಯಾರಿಸಲಾಗುತ್ತಿದೆ.

ಸ್ಮಾರ್ಟಸಿಟಿ ಯೋಜನೆಯಲ್ಲಿ ಸ್ಮಾರ್ಟಸಿಟಿ ಅನುದಾನದೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಅಡಿಯಲ್ಲಿ 04 ಯೋಜನೆಗಳ ಒಟ್ಟು ಮೊತ್ತ ರೂ. 164.82 ಕೋಟಿಗಳ ಯೋಜನೆಗಳನ್ನು ಟೆಂಡರ ಆಹ್ವಾನಿಸಿದ್ದು, ಅದರಲ್ಲಿ ಒಂದು ಯೋಜನೆ ರೂ. 50 ಕೋಟಿ ಬಹುಮಹಡಿಗಳ ವಾಹನ ನಿಲ್ದಾಣಕ್ಕೆ ಕಾರ್ಯಾದೇಶ ನೀಡಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಉಳಿದ ಯೋಜನೆಗಳಾದ ಸ್ಮಾರ್ಟ ಪೋಲ್ ರೂ. 48 ಕೋಟಿ, ಎಲ್.ಇ.ಡಿ ಬೀದಿ ದೀಪ ರೂ. 64.51 ಕೋಟಿ ಮತ್ತು ಸೋಲಾರ ರೂಫ್-ಟಾಪ್ ರೂ. 2.31 ಕೋಟಿ ಯೋಜನೆಗಳಿಗೆ ಮರು ಟೆಂಡರ ಆಹ್ವಾನಿಸಲಾಗುತ್ತಿದೆ.

ಸ್ಮಾರ್ಟಸಿಟಿ ಯೋಜನೆಯಲ್ಲಿ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ರೂ. 190 ಕೋಟಿ, ರಾಜ್ಯ ಸರ್ಕಾರದಿಂದ ರೂ. 190 ಕೋಟಿ, ಒಟ್ಟು ಇಲ್ಲಿಯವರೆಗೆ ರೂ. 380 ಕೋಟಿ ಅನುದಾನ ಸ್ವೀಕರಿಸಲಾಗಿದೆ. ಸದರಿ ಅನುದಾನದಲ್ಲಿ ರೂ. 24.17 ಕೋಟಿ ವೆಚ್ಚವನ್ನು ಮಾಡಲಾಗಿದೆ. ಅದರಲ್ಲಿ ಸ್ಮಾರ್ಟಸಿಟಿ ಯೋಜನೆಗಳಿಗೆ ರೂ. 12.304 ಕೋಟಿ, ಸಮಾಲೋಚನ ಸಂಸ್ಥೆಗೆ (PWCPMC) ರೂ. 5.26 ಕೋಟಿ ಮತ್ತು ಆಡಳಿತ ಹಾಗೂ ಸಿಬ್ಬಂದಿ ವೆಚ್ಚ ರೂ. 6.60 ಕೋಟಿ ವೆಚ್ಚವಾಗಿರುವುದು. ಸದರಿ ವೆಚ್ಚವು ಸ್ಮಾರ್ಟಸಿಟಿ ಯೋಜನೆಯಲ್ಲಿ 2015-16 ರಿಂದ ಜೂನ್ 25-06-2019 ರವರೆಗೆ ಆದ ವೆಚ್ಚ ಇರುವುದು.

ಈ ಪತ್ರಿಕಾ ಮಾಹಿತಿಯೊಂದಿಗೆ ದಿ: 25-06-2019 ರವರೆಗೆ ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಯೋಜನೆಯಲ್ಲಿ ಆದ ಪ್ರಗತಿಯ ಕುರಿತು ವಿವರವಾದ ಯೋಜನೆಗಳ ಸ್ಥಿತಿಗತಿಯ ಬಗ್ಗೆ ಲಗತ್ತಿಸಿ ಸೂಕ್ತ ಮಾಹಿತಿಗಾಗಿ ಸಲ್ಲಿಸಿದೆ.

25.6.

(ಎಸ್. ಎಚ್. ನರೇಗಲ್)
ವಿಶೇಷ ಅಧಿಕಾರಿಗಳು
ಹುಬ್ಬಳ್ಳಿ-ಧಾರವಾಡ ಸ್ಮಾರ್ಟಸಿಟಿ ಲಿಮಿಟೆಡ್,
ಹುಬ್ಬಳ್ಳಿ

**ದೂರವಾಣಿ ಸಂಖ್ಯೆ : 2355322, ಫ್ಯಾಕ್ಸ್ ಸಂಖ್ಯೆ : 2355331 ಇ-ಮೇಲ್ :**
**ಅಭಿನಂದನೆಗಳೊಂದಿಗೆ ಮಾಹಿತಿಗಾಗಿ ಹಾಗೂ ಪ್ರಕಟಣೆಯ ಕೃಪೆಗಾಗಿ :**

1. ಮಾನ್ಯ ಸಂಪಾದಕರು ಸ್ಥಳೀಯ ಎಲ್ಲ ದಿನಪತ್ರಿಕೆಗಳು
2. ಹಿರಿಯ ಸಹಾಯಕ ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಮಿನಿ ವಿಧಾನಸೌಧ, ಹುಬ್ಬಳ್ಳಿ
3. ವರದಿಗಾರರು ಎಲ್ಲ ಸ್ಥಳೀಯ ವಿದ್ಯುನ್ಮಾನ ಪ್ರಸಾರ ಮಾಧ್ಯಮಗಳು
4. ನಿಲಯ ನಿರ್ದೇಶಕರು ಆಕಾಶವಾಣಿ ಕೇಂದ್ರ ಧಾರವಾಡ
5. ನಿರ್ದೇಶಕರು ಕೆ.ಎಲ್.ಇ. ಧ್ವನಿ ಬಿ.ವ್ಹಿ.ಬಿ. ಕಾಲೇಜು ಆವರಣ ವಿದ್ಯಾನಗರ, ಹುಬ್ಬಳ್ಳಿ

**ನೊಂದಾಯಿತ ಕಚೇರಿ : 4ನೇ ಮಹಡಿ, 'ಎಫ್' ಬ್ಲಾಕ್, ಐಟಿ ಪಾರ್ಕ, ಹುಬ್ಬಳ್ಳಿ ಕರ್ನಾಟಕ ರಾಜ್ಯ ಭಾರತ,**
Regd Office : 4th Floor, 'F' Block, IT Park, HUBBALLI - 580 020, Karnataka State, India.
Ph : 0836-2355322, Fax : 0836-2355331, Control Room Assistance : 2213888/2213898.
Website : wwwhubballidharwadsmartcity.com E-mail : smartcityhubballidharwad@gmail.com